**<u>ಪ್ರಧಾನ ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.</u>**

**<u>ಸಿ. ಸಿ. ನಂಬರಃ 1475/2021</u>**

**ಫಿರ್ಯಾದುದಾರರು** ಶ್ರೀ ಈಶ್ವರ, ತಂದೆಃ ಶನಿಯಾರ ನಾಯ್ಕ

**– ವಿರುದ್ಧ –**

**ಆರೋಪಿತರು** ಶ್ರೀ ಅಬ್ದುಲ್ ರಜಾಕ್, ತಂದೆಃ ಮೊಹಮ್ಮದ ಜಾಫರ
ವಯಸ್ಸುಃ 45 ವರ್ಷ
ಸಾಃ ಜಾಫರ ಸಾಹೇಬ ಹೌಸ್, ಅರಬಿ ಮದ್ರಾಸ್,
ಕೆಳದಿ ರಸ್ತೆ, ತಾಲೂಕಃ ಸಾಗರ, ಶಿವಮೊಗ್ಗ.

**<u>ಆಪಾದನೆ</u>**

ಆರೋಪಿತರಾದ ನೀವು ಮತ್ತು ಪಿರ್ಯಾದುದಾರರು ಆತ್ಮೀಯರಾಗಿದ್ದು, ಮುರ್ಡೇಶ್ವರ ಪಟ್ಟಣದಲ್ಲಿರುವ ನಿಮ್ಮ ಹಣ್ಣಿನ ಅಂಗಡಿಯ ಅಭಿವೃದ್ಧಿಗಾಗಿ ಪಿರ್ಯಾದಿಯವರ ಹತ್ತಿರ ದಿನಾಂಕಃ 10-08-2019 ರಂದು ರೂ.2,80,000/- (ಎರಡು ಲಕ್ಷ ಎಂಬತ್ತು ಸಾವಿರ ರೂಪಾಯಿ) ಪಡೆದುಕೊಂಡಿರುತ್ತೀರಿ ಮತ್ತು ಸದ್ರಿ ಹಣವನ್ನು 6 ತಿಂಗಳ ಒಳಗೆ ಮರುಪಾವತಿಸುವುದಾಗಿ ಒಪ್ಪಿಕೊಂಡಿರುತ್ತೀರಿ. ಆನಂತರ ಪಿರ್ಯಾದುದಾರರು ಹಣವನ್ನು ಮರುಪಾವತಿಸುವಂತೆ ನಿಮ್ಮನ್ನು ಕೇಳಿದಾಗ ಇನ್ನೂ ಹೆಚ್ಚಿನ ಕಾಲವಕಾಶವನ್ನು ಕೇಳಿರುತ್ತೀರಿ. ಸದ್ರಿ ಹಣವನ್ನು ಮರು ಪಾವತಿಸುವ ಸಲುವಾಗಿ ನೀವು ಸಿಂಡಿಕೇಟ ಬ್ಯಾಂಕ, ಶಾಖೆ ಮುರ್ಡೇಶ್ವರ ಇದರ ಚೆಕ್ಕ ನಂಬರ್ 610759 ನ್ನು ರೂ.2,80,000/- (ಎರಡು ಲಕ್ಷ ಎಂಬತ್ತು ಸಾವಿರ ರೂಪಾಯಿ) ಮೊತ್ತಕ್ಕೆ ದಿನಾಂಕಃ 09-02-2021 ಎಂದು ನಮೂದಿಸಿ ಫಿರ್ಯಾದಿದಾರರಿಗೆ ನೀಡಿರುತ್ತೀರಿ, ಸದ್ರಿ ಚೆಕ್ಕನ್ನು ಫಿರ್ಯಾದಿದಾರರು ನಗಧೀಕರಣಕ್ಕಾಗಿ ಅವರ ಬ್ಯಾಂಕರರಾದ ಕೆನರಾ ಬ್ಯಾಂಕ್, ಮುರ್ಡೇಶ್ವರ ಮೂಲಕ ಹಾಜರ ಪಡಿಸಿದಾಗ, "Funds Insufficient" ಎಂಬ ಹಿಂಬರಹದೊಂದಿಗೆ ದಿನಾಂಕಃ 11-02-2021 ರಂದು ವಾಪಸ್ಸು ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 23-02-2021 ರಂದು ತಮ್ಮ ವಕೀಲರ ಮೂಲಕ ನೋಟಸ್ ನ್ನು ನಿಮಗೆ ನೀಡಿ, ನೋಟಿಸು ಮುಟ್ಟಿದ 15 ದಿವಸದೊಳಗಡೆ ಚೆಕ್ಕನಲ್ಲಿ ನಮೂದಿಸಿದ ಹಣವನ್ನು ನೀಡುವಂತೆ

ಸೂಚಿಸಿದ್ದು ಇರುತ್ತದೆ, ಸದ್ರಿ ನೋಟಿಸನ್ನು ದಿನಾಂಕಃ 25-02-2021 ರಂದು ಜ್ಯಾರಿ ಆಗಿದ್ದು, ಇಂದಿನವರೆಗೂ ಸಹ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ – ಹೌದು.

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ – ಇಲ್ಲ. ವಿಚಾರಣೆಯಾಗಬೇಕು.

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ಸಹಿ ಇದೆ/-

**(ಶ್ರೀಮತಿ.ಧನವತಿ)**

ಪ್ರಧಾನ ಸಿವಿಲ್ ಜಡ್ಜ ಮತ್ತು

ದಿನಾಂಕಃ 06-04-2024.

ಪ್ರ. ದ. ನ್ಯಾಯಿಕ ದಂಡಾಧಿಕಾರಿ, ಭಟ್ಕಳ.